ಅಚ್ಚರಿಪಟ್ಟು ಪ್ರತಿಕ್ರಿಯಿಸಲಿಲ್ಲ. ತನ್ನ ವಿಷಯವೇ ಇದಕ್ಕು ದೊಡ್ಡದಿದೆ ಅಂದುಕೊಂಡು ಸುಮ್ಮನಾದನಿರಬೇಕು... ಬಳಿಕ, ನಾನೇ ಸುಮಾರು ಹಿಂದೇಟು ಪಟ್ಟುಕೊಂಡೇ 'ಪಾ, ನೀನೇನೂ ಅಂದುಕೊಳ್ಳಲ್ಲ ಅಂದರೆ ಒಂದು ವಿಷಯ... ಕೆನ್ನೈ ಗೋ ಬ್ಯಾಕ್ ಟು ಸಾಮ್ರಾಟ್? ತನ್ವಿ ಒಬ್ಬಳೇ ಇದ್ದಾಳಲ್ಲ ಅಂತ ಚಿಂತೆ ಕಾಡುತ್ತಿದೆ...' ಅಂತಂದೆ. ನಾಲ್ಕೈದು ವರ್ಷ ಬಿಟ್ಟಿದ್ದ ಮನೆಯ ಮಗನು ಹೀಗೆ ಬಂದು ಹಾಗೆ ಹೋಗುತ್ತಿದ್ದಾನಂತ ಎಲ್ಲಿ ದೊಡ್ಡದು ಮಾಡಿ ಮುನಿಯುತ್ತಾನೋ ಅಂದುಕೊಂಡೇ ಹೇಳಿದೆ. ಅವನು ಹೆಚ್ಚೇನೂ ಪ್ರತಿಕ್ರಿಯಿಸಲೇ ಇಲ್ಲ. 'ನಿನ್ನಮ್ಮ ಲೌಕಿಕದಲ್ಲಿರುವಾಗ ಫೋನು ಮಾಡುತೀನಿ... ಆಗೊಮ್ಮೆ ಬಂದು ನೋಡು...' ಅಂತಂದ. ಅವನ ಮನಸ್ಸಿನ ತುಮುಲವೇನೆಂದು ಚೆನ್ನಾಗಿ ಗೊತ್ತಾಯಿತು. ಫಲಿಸಿದ ಪ್ರೀತಿಯೊಟ್ಟಿಗೇ ಅದರದೇ ಅವಳಿಯ ಹಾಗೆ ತಳಕಿಟ್ಟುಕೊಂಡು ಸದಾ ಇರುವುದು ಮತ್ತು ಬರುವುದು ನೋವೊಂದೇ ತಾನೇ... ಅಂದುಕೊಂಡೆ. ಆ ಹೊತ್ತಿಗೆ, 'ಒನ್ನಿಮಿಷ ಇರು...' ಅಂತಂದ ಪಾ, ತನ್ನ ಕೋಣೆ ಹೊಕ್ಕು ಸಾವಿರದ ನೋಟುಗಳಿದ್ದ ಕಂತೆಯೊಂದನ್ನು ಕೈಗಿತ್ತು, 'ಇಪ್ಪತ್ತೈದಿದೆ... ಖರ್ಚಿಗಾಗುತ್ತೆ. ಇಟ್ಟುಕೋ. ವಾಸ್ತವದಲ್ಲಿ ಇವೊತ್ತು, ನೀನು ಬಂದ ಖುಷಿಯಲ್ಲಿ ಎಲ್ಲರನ್ನೂ ಕರೆದು ಪಾರ್ಟಿ ಮಾಡಬೇಕಿತ್ತು...' ಅಂತಂದು ಮತ್ತೆ ಬಿಕ್ಕಿದ. 'ಇಲ್ಲಿನ ನಂಬರ್ ಸಿಗೋವರೆಗೂ ಹಳೆಯದನ್ನೇ ಬಳಸಿಕೋ ಆಯಿತಾ? ಯಾತಕ್ಕು ಹೊಸ ಸಿಮ್ಮ್ ತಕ್ಕೊಂಡು ಫೋನು ಮಾಡು. ಹೋಟೆಲು ತಲುಪಿದ್ದೇ ಅಲ್ಲಿನ ಕಾಂಟ್ಯಾಕ್ಟ್ ಶೇರ್ಮಾಡು... ಯಾವ ರೂಮಿನಲ್ಲಿದ್ದೀರಿ? ಯಾರ ಹೆಸರಲ್ಲಿ ಬುಕ್ಕಾಗಿದೆ?' ಅಂತೆಲ್ಲ ವಿವರಗಳನ್ನು ಕೇಳಿ ಕೇಳಿ, ಹೆಕ್ಕಿ ಹೆಕ್ಕಿ ಬರೆದಿಟ್ಟುಕೊಂಡ. 'ವಾಪಸು ಹೇಗೆ ಹೋಗುತೀಯಾ? ನೀನು ಮೊದಲು ಬಳಸುತಿದ್ದೆಯಲ್ಲಾ, ಆ ಕಾರನ್ನು ಚೂರುಪಾರು ರಿಪೇರಿ ಮಾಡಿಸಿ ರೆಡಿಯಿಟ್ಟಿದ್ದೀನಿ... ತಗೊಂಡು ಹೋಗುತೀಯಾ? ಆದರೆ ಜೋಪಾನ... ಊರು ಮೊದಲಿನಂತಿಲ್ಲ. ಸಿಕ್ಕಾಪಟ್ಟೆ ಟ್ರಾಫಿಕ್ಕು... ಬೀ ಎಟ್ ಈಸ್ ವೈಲ್ ಯು ಡ್ರೈವ್...' ಅನ್ನುತ್ತ ಕಾರಿನ ಕೀಲಿಯನ್ನು ಕೈಯಲ್ಲಿಟ್ಟ, 'ಸಿದ್ಧ್... ಒಂದು ವಿಷಯ. ಯಾವುದೇ ಕಾರಣಕ್ಕೂ ಆ ಹುಡುಗಿಯ ಕೈಬಿಡಬೇಡ... ನಿನ್ನನ್ನೇ ನಂಬಿಕೊಂಡು ಬಂದಿದೆ...' ಎಂದು ಹೇಳಿ ಬೀಳ್ಕೊಟ್ಟ.

ಇದ್ದಕ್ಕಿದ್ದಂತೆ ಮಾರ್ಪಟ್ಟುಹೋದ ಪಾ ಕುರಿತಾಗಿಯೇ ಮನಸ್ಸು ತುಯ್ದುಕೊಂಡು, ಹಳೆಯ ಕಾರೇರಿಕೊಂಡು ವಾಪಸು ಹೋಟೆಲು ತಲುಪಿದೆ. ಬದಲಿದ ಊರಿನೊಡನೆ ಬದುಕಿನ ಬದುಗಳೆಲ್ಲ ಬದಲಿವೆಯೆನ್ನಿಸಿತು. ದುಃಖವಾಯಿತು. ಹೋಟೆಲಿನಲ್ಲಿ ತನ್ವಿ ಖುಷಿಯಿಂದಲೇ ನನ್ನನ್ನು ಬರಮಾಡಿಕೊಂಡಳು. ಹಾಸಿಗೆಯಲ್ಲಿ ಅವಳ ಹೆಗಲಿನಲ್ಲಿ ಮೋರೆಯಿಟ್ಟು ಬಿಕ್ಕಿ ಬಿಕ್ಕಿ ಅತ್ತುಬಿಟ್ಟೆ. ಅವಳೇ ಸಮಾಧಾನ ಹೇಳಿದಳು. ಆ ಬಳಿಕ ಮುಂದೇನೆತ್ತವಿತ್ಯಾದಿ ಸಮಾಚಾರದಲ್ಲಿ

**ಈ ಇಬ್ಬರಲ್ಲಿ ಯಾರು ಸರಿ, ಯಾರು ತಪ್ಪು? ಯಾವುದು ನಿಜ, ಯಾವುದು ಸುಳ್ಳು? ಸುಮಾರು ಪ್ರಶ್ನೆಗಳೆದ್ದವು. ಇನ್ನು ನನ್ನ ಮಟ್ಟಿಗಾದರೂ ಯಾರು ಬೇಕು? ಜೀವನವನ್ನು ಸಂಭ್ರಮಿಸುವ ಇವಳೋ? ವಿಮುಕ್ತಸ್ಥಿತಿಯಲ್ಲಿದ್ದ ಅವಳೋ?**